ಓ. ಎಸ್ . 112/2020 ಪಿ.ಡಬ್ಲ್ಯೂ - 1 ಅಶೋಕ ಖಡಬಡಿ

( ದಿನಾಂಕ 19-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

<u>ಪಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎ ಎಂ ವಿ ವಕೀಲರಿಂದ -</u>

1. ನಾನು ಬಿ ಎ ಓದಿದ್ದೇನೆ . ಮಹಾದೇವ ಖಡಬಡಿ ಇವರು ನನ್ನ ಖಾಸ ಅಣ್ಣ . ಅವರು ನಿಪ್ಪಾಣಿಯಲ್ಲಿ ವಕೀಲ ವೃತ್ತಿ ಮಾಡುತ್ತಾರೆ. ಗುರುಸಿದ್ದಪ್ಪ ಖಡಬಡಿ ಇವರು 1 ವರ್ಷದ ಹಿಂದೆ ಈತ ತೀರಿಕೊಂಡಿದ್ದಾರೆ. ಮುಖ್ಯ ವಿಚಾರಣೆಯನ್ನು ಮೃತ ಗುರುಸಿದ್ದಪ್ಪ ಖಡಬಡಿ ಇವರ ಪರವಾಗಿಯೂ ನಾನು ಹಾಕಿದ್ದೇನೆ . ಆ ಮೃತ ಪಟ್ಟ ವಿಚಾರವನ್ನು ನನ್ನ ವಕೀಲರಿಗೆ ತಿಳಿಸಿದ್ದೇನೆ. ಆದರೂ ಸಹ ಕಾನೂನು ಪ್ರಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ನಿಜ. ಸಿಟಿಎಸ್ 1524 ಇದು 50 ವರ್ಷದ ಹಳೆಯ ಮನೆ ಎಂದರೆ ನಿಜ. ಇದರ ಪೂರ್ವಕ್ಕೆ ಪ್ರತಿವಾದಿಯ ಮನೆ ಇದೆ. ಸಿ ಟಿ ಎಸ್ 1526 ಸಹ 50 ವರ್ಷದ ಹಳೆಯ ಮನೆ ಎಂದರೆ ನಿಜ. ಸಿ ಟಿ ಎಸ್ 1526 ರ ಪಶ್ಚಿಮಕ್ಕೆ ಪ್ರತಿವಾದಿಯ ಮನೆ ಬರುತ್ತದೆ ಎಂದರೆ ನಿಜ. ಸಿ ಟಿ ಎಸ್ 1524 ಮತ್ತು 1526 ಗಳನ್ನು ನಾವು ಸ್ವತಃ ಕಟ್ಟಿಲ್ಲ ಎಂದರೆ ನಿಜ. ಸಿ ಟಿ ಎಸ್ 1524 ಮತ್ತು 1526 ಇವು ಮೂಲತಃ ಮುರಿಗೆವ್ವ ಸಾತಪ್ಪ ತಾಳಿ ಇವರ ಆಸ್ತಿ ಎಂದರೆ ನಿಜ. ಮುರಿಗೆವ್ವನ ಮಗಳು ನನ್ನ ತಾಯಿ ಸುಶೀಲವ್ವ ಎಂದರೆ ನಿಜ. ಸಿ ಟಿ ಎಸ್ 1524 ಮತ್ತು 1526 ನನ್ನ ತಾಯಿಗೆ ಮೃತ್ಯು ಪತ್ರದ ಮೂಲಕ ನನ್ನ ಅಜ್ಜಿ ಕೊಟ್ಟಿದ್ದಳು ಎಂದರೆ ನಿಜ. ಆ ಮೃತ್ಯು ಪತ್ರದ ಪ್ರಕಾರ ನನನ್ನ ತಾಯಿ ಎರಡೂ ಆಸ್ತಿಗಳಿಗೆ ಮಾಲೀಕಳಾದಳು ಎಂದರೆ ನಿಜ.

2. ಸಿ ಟಿ ಎಸ್ 1524 ಮತ್ತು 1526 ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿ ಯಾವುದೇ ಮಾಲ್ಕಿ ಬಗ್ಗೆ ತಕರಾರು ಮಾಡಿಲ್ಲ ಎಂದರೆ ನಿಜ. ಸಿ ಟಿ ಎಸ್ 1524 ಮತ್ತು 1526 ಗಳಿಗೆ ಸಂಬಂಧಪಟ್ಟಂತೆ ನನ್ನ ಅಜ್ಜಿ ಮುರಿಗೆವ್ವ ಮತ್ತು ಆಕೆಯ ಅಣ್ಣತಮ್ಮಂದಿರರ ನಡುವೆ ಹುಕ್ಕೇರಿ ನ್ಯಾಯಾಲಯದಲ್ಲಿ OS 104/1969 ರಂತೆ ದಾವೆ ಆಗಿತ್ತು ಎಂದರೆ ನಿಜ. ಈ ಎಲ್ಲ ಆಸ್ತಿಗಳು ಆ ದಾವೆಯಲ್ಲಿ ಇತ್ಯರ್ಥ ಆಗಿ ಸಿ ಟಿ ಎಸ್ 1524 ಮತ್ತು 1526 ನನ್ನ ಅಜ್ಜಿ ಪಾಲಿಗೆ ಬಂದಿತ್ತು ಎಂದರೆ ನಿಜ. EP 3/1973 ನ್ನು ನನ್ನ ಅಜ್ಜಿ ಹಾಕಿ ಈ ಆಸ್ತಿಗಳನ್ನು ತನ್ನ ತಾಬಾಕ್ಕೆ ತೆಗೆದುಕೊಂಡಿದ್ದಳು ಎಂದರೆ ನಿಜ. ನನ್ನ ಅಜ್ಜಿ ತೀರಿಕೊಂಡ ನಂತರ ನನ್ನ ತಾಯಿಯೇ ಈ ಎಲ್ಲಾ ಆಸ್ತಿಗಳಿಗೆ ಸಂಪೂರ್ಣ ಹಕ್ಕುದಾರಳು ಆಗಿದಾದಳೆ ಎಂದರೆ ನಿಜ.

3. ಸಿಟಿಎಸ್ ನಂ. 1525 ರ ಮೂಲತಃ ಚಂಪವ್ವ @ ಪಾರವ್ವ ಶಂಕರ ತಾರಳಿ ಇವರ ಆಸ್ತಿ ಎಂದರೆ ನಿಜ. ಈ ಆಸ್ತಿ OS 104/1969 ರಲ್ಲಿ ಉಲ್ಲೇಖ ಆಗಿತ್ತು ಎಂದರೆ ನಿಜ. ಸದರಿ ಆಸ್ತಿ

ಚಂದಪವ್ವ ಶಂಕರ ತಾರಳಿ ಇವರ ಮಾಲ್ಕಿಗೆ ಹೋಗಿತ್ತು ಎಂದರೆ ನಿಜ. EP 3/1973 ರಂತೆ ಚಂಪವ್ವ ಸಿಟಿಎಸ್ 1525 ತನ್ನ ತಾಬಾ ತೆಗೆದುಕೊಂಡಿದ್ದಳು ಎಂದರೆ ನಿಜ. ಅದರಲ್ಲಿ ಚಂಪವ್ವಳ ಹೆಸರು 1975 ರಲ್ಲಿ ದಾಖಲ ಆಗಿತ್ತು ಎಂದರೆ ನಿಜ. ನನ್ನ ತಾಯಿ ಅಥವಾ ಅಜ್ಜಿ ಇವರ ಹಯಾಯತಿಯಲ್ಲಿ ಸಿಟಿಎಸ್ 1525 ರ ಆಸ್ತಿ ತಮ್ಮದು ಇದೆ ಎಂದು ಯಾವತ್ತೂ ಅದರ ಮಾಲಿಕತ್ವದ ಬಗ್ಗೆ ತಕರಾರು ಮಾಡಿಲ್ಲ ಎಂದರೆ ನಿಜ. ನಾನೂ ಸಹ ಈ ದಾವೆಯಲ್ಲಿ ಸಿಟಿಎಸ್ 1525 ನಮ್ಮ ಮಾಲಿಕತ್ವದ್ದು ಇದೆ ಎಂದು ತಕರಾರು ಮಾಡಿಲ್ಲ ಎಂದರೆ ನಿಜ.

4. ಚಂಪವ್ವ ತಾರಳಿ ಇವರಿಗೆ ಹಣದ ಅವಶ್ಯಕತೆ ಇದ್ದುದ್ದರಿಂದ ದಿನಾಂಕ 15-03-2001 ರಂದು ತಮ್ಮ ಪ್ರಪಂಚದ ಗರ್ಜಿಗಾಗಿ ಪ್ರತಿವಾದಿಗೆ ರೂ. 2,17,000/- ಗೆ ಮಾರಾಟ ಮಾಡಿದ್ದಳು ಎಂದರೆ ನಿಜ . ಖರೀದಿ ಕೊಡುವ ಪೂರ್ವದಲ್ಲಿ ದಿನಾಂಕ 5-02-2001 ರಂದು ಚಂಪವ್ವ ಇದೇ ಆಸ್ತಿಗೆ ಒಂದು ಕರಾರು ಪತ್ರ ಮಾಡಿಕೊಟ್ಟಿದ್ದಳು ಎಂದರೆ ನಿಜ. ನಾನು ಇದುವರೆಗೂ ಸಿ ಟಿ ಎಸ್ ನಂ. 1525 ರ ಖರೀದಿ ಪತ್ರ ತೆಗೆದು ನೋಡಿಲ್ಲ. ಆ ಖರೀದಿ ಪತ್ರದಲ್ಲಿ ಸಿ ಟಿ ಎಸ್ ನಂ. 1525 ರ ಯಾವ ಯಾವ ಗೋಡೆಗಳು ಸಮಾಯಕ ಇವೆ ಎಂದು ಖರೀದಿ ಪತ್ರದಲ್ಲಿ ಉಲ್ಲೇಖ ಆಗಿದೆ ಎಂದು ನಾನು ನೋಡಿಲ್ಲ. ಆ ಖರೀದಿ ಪತ್ರದ ನಕಲು ಪ್ರತಿ ಪಡೆದುಕೊಂಡು ದಾವೆ ಮಾಡಲು ನನಗೆ ತೊಂದರೆ ಇರಲಿಲ್ಲ. ನಾನು ಸಿ ಟಿ ಎಸ್ ನಂ. 1525 ರ ಖರೀದಿ ಪತ್ರದ ನಕಲು ಅಥವಾ ಬೇರೆ ಯಾವುದೇ ದಾಖಲೆಗಳನ್ನು ಹಾಜರ ಮಾಡಿಲ್ಲ ಎಂದರೆ ನಿಜ.

5. ದಾವೆ ಮಾಡುವಾಗ ಸಿ ಟಿ ಎಸ್ ನಂ. 1525 ರ ಉತಾರ ಹಾಜರ ಮಾಡಿದ್ದೆ ಎಂದರೆ ನಿಜ. ಆ ಆಸ್ತಿ ಪ್ರತಿವಾದಿ ಹೆಸರಿಗೆ ಇದೇ ಎಂದರೆ ನಿಜ. ಖರೀದಿ ತೆಗೆದುಕೊಂಡಾಗ ಅದು ಹಳೆ ಮನೆ ಇತ್ತು ಎಂದರೆ ನಿಜ. 2026 ರಲ್ಲೂ ಸಹ ಆ ಹಳ ಮನೆ ಹಾಗೆಯೇ ಇದೆ ಎಂದರೆ ನಿಜ. ಸಿ ಟಿ ಎಸ್ ನಂ. 1525 ರ ಮುಖ್ಯ ಬಾಗಿಲು ಉತ್ತರಕ್ಕೆ ಮುಖ ಆಗಿದೆ ಎಂದರೆ ನಿಜ. ಆ ಬಾಗಿಲ ಮುಂದೆ ಪೂರ್ವ ಪಶ್ಚಿಮವಾಗಿ ಒಂದು ರಸ್ತೆ ಇದೆ ಎಂದರೆ ನಿಜ. ಸಿ ಟಿ ಎಸ್ ನಂ. 1525 ರ ಉತ್ತರ ದಿಕ್ಕಿಗೆ ಪಶ್ಚಿಮ ಮೂಲೆಯಲ್ಲಿ ಒಂದು ಕಬ್ಬಿಣದ ಮೆಟ್ಟಿಲು ( ಜಿನೆ) ಇದೆ ಎಂದರೆ ನಿಜ. ಆ ಕಬ್ಬಿಣದ ಮೆಟ್ಟಿಲು ನಾವು ಉಪಯೋಗಿಸಿ ಅದರ ಮೂಲಕ ಸಿ ಟಿ ಎಸ್ ನಂ 1526 ರ ಮೊದಲನೆ ಮಹಡಿಗೆ ಹೋಗುತ್ತೇವೆ ಎಂದರೆ ನಿಜ. ಪ್ರತಿವಾದಿ ಸಹ ಸಿ ಟಿ ಎಸ್ ನಂ 1525 ರ ಮೊದಲನೆ ಮಹಡಿಗೆ ಹೋಗುತ್ತಾರೆ ಎಂದರೆ ನಿಜ. ಅದು ಪ್ರತಿವಾದಿ ಮನೆಯ ಉತ್ತರಕ್ಕೆ ಇದೆ ಎಂದರೆ ಸಾಕ್ಷಿ ಗೋಡೆಯ ದಂಡೆಗೆ ಇದೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಆ ಕಬ್ಬಿಣದ ಮಟ್ಟಿಲು ಉಪಯೋಗಿಸಲು ತೊಂದರೆ ಮಾಡಿಲ್ಲ ಎಂದರೆ ನಿಜ.

**(ಪ್ರತಿವಾದಿ ಪರ ವಕೀಲರು ಮುಂದುವರೆದ ವಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ